# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 361/2021**

**ಸಿ.ಡಬ್ಲೂಃ 01 ಪಿಡಬ್ಲೂಃ01**

ಸಾಕ್ಷಿದಾರರ ಹೆಸರುಃ ಪರಮೇಶಗೌಡ ತಂದೆಃ ವೀರುಪಾಕ್ಷಗೌಡ
ವಯಸ್ಸುಃ 39 ವರ್ಷ
ಉದ್ಯೋಗಃ ವ್ಯವಸಾಯ,
ಸಾಕೀನಃ ಸೋವೆನಹಳ್ಳಿ

ದಿಃ 29-07-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ಅರೋಪಿತರ ಪರಿಚಯ ಇರುತ್ತದೆ. ಹಿಗೇ ದಿ.**20-01-2021** ರಂದು ಸಂಜೆ. **07.45** ಗಂಟೆಗೆ ನಾನು ಮನೆಯಲ್ಲಿ ಇರುವಾಗ ಚಾ.ಸಾ.**10** ರವರು ಬಂದು ಆಂಜನೇಯ ದೇವಸ್ಥಾನದ ಸಮೀಪ ಶಿವನಗೌಡರ ಮಗ ಸಂತೋಷ ಗೌಡನು ಬೈಕನಲ್ಲಿ ತಮ್ಮ ಗ್ರಾಮದಿಂದ ಹೊಸ ಪ್ಲ್ಯಾಟ್ ಕಡೆ ಹೋಗುತ್ತಿರುವಾಗ ಟ್ರ್ಯಾಕ್ಟರ್ ಹೊಸ ಪ್ಲಾಟಕಡೆಯಿಂದ ಹಳೆ ಗ್ರಾಮದ ಕಡೆಗೆ ಬರುತ್ತಿರುವ ವೇಳೆಯಲ್ಲಿ ಅಪಘಾತವಾಗಿರುತ್ತದೆ ಎಂದು ಹೇಳಿರುತ್ತಾನೆ. ನಾನು ಮತ್ತು ಚಾ.ಸಾ.**13** ರವರು ಚಾ.ಸಾ.**06** ರವರು ಹಾಗೂ ಚಾ.ಸಾ.**10** ರವರು ಬೈಕಿನಲ್ಲಿ ಅಪಘಾತವಾದ ಸ್ಥಳಕ್ಕೆ ಹೋಗಿ ನೋಡಿದಾಗ ತಲೆಗೆ ಪೆಟ್ಟಾಗಿರುವುದರಿಂದ ತಲೆ ಮತ್ತು ಕಿವಿಯಲ್ಲಿ ರಕ್ತಬರುತ್ತಿತ್ತು, ಮತ್ತು ಮೈಕೈಯಲ್ಲಿ ಕಾಲುಗಳಲ್ಲಿ ರಕ್ತಗಾಯಗಳುಂಟಾಗಿರುತ್ತದೆ. ಚಾ.ಸಾ.**12** ರವರ ಕಾರಿನಲ್ಲಿ ಸಂತೋಷನನ್ನು ಹಾಕಿಕೊಂಡು ಹಡಗಲಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದೆವು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾ.ಸಾ.**04** ಮತ್ತು ಇನ್ನೊಬ್ಬರ ಜೊತೆಗೆ ದಾವಣಗೇರೆಗೆ ಕಳುಹಿಸಿಕೊಟ್ಟಿರುತ್ತೇವೆ. ಅಪಘಾತವಾದ ಮರುದಿನ ಗಾಯಾಳು ಆದ ಸಂತೋಷನು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದರಿಂದ ನಾನು ಮತ್ತು ಚಾ.ಸಾ.**02** ರವರು ದಾವಣಗೆರೆಯ ಆಸ್ಪತ್ರೆಗೆ ಹೋಗಿ ಮೃತದೇಹವನ್ನು ತಂದಿರುತ್ತೇವೆ. ಸದರಿ ಅಪಘಾತಪಡಿಸಿದ ಟ್ರ್ಯಾಕ್ಟರನ ನಂಬರ **KA.35.TA.3577** ನೆದ್ದರ ಚಾಲಕನ ಅತೀ ವೇಗ ಮತ್ತು ಅಜಾಗರೂಕತೆಯ ಕಾರಣದಿಂದ ಅಪಘಾತವಾಗಿರುತ್ತದೆ ಎಂದು ನಾನು ದೂರನ್ನು ದಿ.**20-01-2021** ರಂದು ರಾತ್ರಿ.**09.30** ಗಂಟೆಗೆ ನೀಡಿರುತ್ತೇನೆ. ಅಪಘಾತ ಪಡಿಸಿದ ಟ್ರ್ಯಾಕ್ಟರ ಚಾಲಕನ ಹೆಸರು ಎಮ್. ಚನ್ನಪ್ಪ ತಂದೆ ಮುಂಡರಗಿ ಮಲ್ಲಪ್ಪ ಎಂದು ತಿಳಿದಿರುತ್ತದೆ. ಆರೋಪಿತನು ಚಲಾಯಿಸಿಕೊಂಡು ಬಂದ ಟ್ರ್ಯಾಕ್ಟರಗೆ ಒಂದೇ ಲೈಟ ಇದ್ದು ಇನ್ನೊಂದು ಲೈಟ ಇರುವುದಿಲ್ಲ. ಅಪಘಾತವಾದ ಸ್ಥಳಕ್ಕೆ ನಾವು ಹೋದಾಗ ಆರೋಪಿತನು ತನ್ನ

**ಟ್ರ್ಯಾಕ್ಟರನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ. ನಾನು ಆದಿನ ಠಾಣೆಯಲ್ಲಿ ನೀಡಿದ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿ.ಪಿ.01 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.01 ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ಪುನಹ ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿತರ ಗುರುತುವಿಕೆಯ ಬಗ್ಗೆ ಆರೋಪಿತರ ಪರ ವಕೀಲರ ಪರ ತಕರಾರು ಇರುವುದಿಲ್ಲ.**

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

ನನ್ನ ಸಮಕ್ಷಮ

**Sd/-**

**(ಶ್ರೀಮತಿ ಅಕ್ಷತಾ ಟಿ)**
**ಜೆ.ಎಂ.ಎಫ್.ಸಿ., ನ್ಯಾಯಾಧೀಶರು,**
**ಹಡಗಲಿ.**